ಅಧ್ಯಕ್ಷರು : ಬೈರೇಗೌಡರೇ ಕುಳಿತುಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಕೇಳಿದರೆ ಏನಾಗುತ್ತದೆ.

ಅಧ್ಯಕ್ಷರು : ಕೇಳಿದರೆ ಏನಾಗುತ್ತದೆಂದರೆ ಟೈಮ್ ಆಗುತ್ತದೆ. ಪ್ರಶ್ನೆಗಳು ಲ್ಯಾಪ್ಸ್ ಆಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಆ ಮಾನ್ಯ ಸದಸ್ಯರಿಗೆ ಇನ್ನು ಎರಡು ಉಪಪ್ರಶ್ನೆಗಳನ್ನು ಕೇಳುವಂತಹ ಅಧಿಕಾರವಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ತಾವೇ ಹೇಳಿದ್ದೀರಿ. ಹಣ ಯಾವುದು ಉಳಿದಿಲ್ಲ, 131 ಕೋಟಿ 20 ಲಕ್ಷ ರೂ.ಗಳು ಉಳಿದಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಲೋಕೋಪಯೋಗಿ ಕಾಮಗಾರಿಗೆ ಪಾವತಿ ಮಾಡಬೇಕಾದಂಥ ಒಟ್ಟು 131 ಕೋಟಿ 20 ಲಕ್ಷ ರೂ.ಗಳು ಉಳಿಕೆಯ ಬಿಲ್ ಮಾತ್ರವಿರುತ್ತದೆ ಎಂದು ತಾವು ಹೇಳಿದ್ದೀರಲ್ಲಾ, ಅಂದಮೇಲೆ ಕಂಟ್ರಾಕ್ಟರರ ಗತಿ ಏನಾಗುತ್ತದೆ? ತಾವು ಹೇಳಿದ್ದೀರಿ ಕೊಡುತ್ತೇವೆಂದು; ನೀವು ಇಲ್ಲಿ ಎಂಎಲ್ಎಗೆ ಫಂಡ್ ಎಂದು ಕೊಡುವುದಿಲ್ಲ, ರೋಡುಗಳ ಗತಿ ದೇವರೇ ಗತಿ, ತಾವು ಅದರ ಬಗ್ಗೆ ನೀತಿ ನಿರೂಪಣೆ ಮಾಡುವುದಿಲ್ಲ. ಎಂಎಲ್ಎಗಳಿಗೆ ಬರೀ 5 ಲಕ್ಷ ರೂಪಾಯಿಗಳು ಕೊಡುತ್ತೀರಿ ಅಂದರೆ ಅದು ಎಂಎಲ್ಎ ಮನೆಗಳಿಗೆ ಅಲ್ಲ ರೋಡ್ ಮತ್ತು ಕಾಮಗಾರಿಗಳಿಗೆ;

ಶ್ರೀ ಸಿ. ಬೈರೇಗೌಡ : ವಿಧಾನಸಭಾ ಕ್ಷೇತ್ರಕ್ಕೆ ಎಂದು ಕೊಡತಕ್ಕದ್ದು ; ಆ ಕ್ಷೇತ್ರದಿಂದ ಯಾರು ರೆಪ್ರೆಸೆಂಟ್ ಮಾಡುತ್ತಾರೆ ಅವರು ಮಾತ್ರ ತೆಗೆದುಕೊಳ್ಳಲಿ.

ಶ್ರೀ ಗುರುಪಾದಪ್ಪ ನಾಗಮಮಾರಪಳ್ಳಿ: ಅವರಿಗೆ ಏಕೆ ಕೊಡಬಾರದು?

ಶ್ರೀ ಕೆ.ಹೆಚ್. ರಂಗನಾಥ್ : 131 ಕೋಟಿ ರೂಪಾಯಿಗಳು ಏನಿದೆ ಅದನ್ನು ನಾನು ಹೇಳಿದೆ. ಯಾವ ಬಿಲ್ ಉಳಿಯುತ್ತದೆ ಅದನ್ನು ಮಾರ್ಚಿ ಒಳಗೆ ಮಾಡುತ್ತೇವೆ. ಬಡ್ಜೆಟ್ಟಿನಲ್ಲಿ ಕೆಲಸವನ್ನು ಸೇರಿಸಿದ್ದೇವೆ. ಪ್ರೋಗ್ರಾಂ ವರ್ಕ್ನಲ್ಲಿ ಏನು ಸೇರಿಸಿದ್ದೇವೆ.ಅದನ್ನು ನಾವು ಪೂರ್ತಿ ಮಾಡುವಂತಹ ಜವಾಬ್ದಾರಿ ಇದೆ. ಅದು ಆಗುತ್ತದೆ ಎನ್ನುವಂತಹ ಮಾತನ್ನು ಹೇಳಿದೆ. ಮಾನ್ಯ ಸದಸ್ಯರು ಬೇರೆ ಏನು ಹಣವನ್ನು ಕೇಳುತ್ತಿದ್ದಾರೆ. ಅದಕ್ಕೆ ಉತ್ತರ ಹೇಳಿದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ಮಾರ್ಚಿ ಒಳಗೆ 13 ಸಾವಿರ ಕಂಪ್ಲೀಟ್ ಮಾಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ತಾವು ನಿಧಾನವಾಗಿ ಏಕೆ ಮಾತನಾಡುವುದಿಲ್ಲ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ: ಮಾರ್ಚಿ ಒಳಗೆ 13, 626 ರೂಪಾಯಿಗಳನ್ನು ಕಂಪ್ಲೀಟ್ ಆಗಿ ಕೊಡುತ್ತೇವೆಂದು ಹೇಳುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಮಾಡುತ್ತೇನೆ ಎಂದು ಹೇಳುತ್ತೇನೆ, ಈ ವರ್ಷದ ಬಜೆಟ್ ಗ್ರಾಂಟ್ ನಾನ್ ಪ್ಲಾನ್ ವರ್ಕ್ನಲ್ಲಿ ಏನಿದೆ, ಪ್ರೋಗ್ರಾಂ ಏನೇನಾಗಿದೆ, ಎಷ್ಟು ಹಣ ಇಟ್ಟಿದ್ದೇವೆ. ಅದನ್ನು ಖರ್ಚು ಮಾಡಿ, ಆ ಕೆಲಸವನ್ನು ಪೂರ್ಣ ಮಾಡುತ್ತೇವೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕಿನಿಂದ ಸಾಲ

65 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕ್ ಹಾಗೂ ಇತರೆ ಸಂಸ್ಥೆಗಳಿಂದ ಇದುವರೆವಿಗೂ ತೆಗೆದುಕೊಂಡಿರುವ ಸಾಲಗಳ ಮೊತ್ತವೆಷ್ಟು ಹಾಗೂ ಈ ಸಾಲಗಳ ಮರುಪಾವತಿ ಆಗಬೇಕಿರುವುದೆಷ್ಟು?

ಅ) ಇತ್ತೀಚೆಗೆ ವಿಶ್ವಬ್ಯಾಂಕಿನಿಂದ ವಿದ್ಯುಚ್ಛಕ್ತಿ ಮಂಡಳಿಗೆ ಕೊಡುತ್ತಿರುವ ಸಾಲ ಮತ್ತು ನೆರವನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಈ) ನಿಲ್ಲಿಸಿದ್ದಲ್ಲಿ, ಅದಕ್ಕೆ ಸರ್ಕಾರ ಕಂಡು ಹಿಡಿದಿರುವ ಪರಿಹಾರಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿಶ್ವಬ್ಯಾಂಕ್ ಹಾಗೂ ಇತರೇ ಸಂಸ್ಥೆಗಳಿಂದ ಇದುವರೆವಿಗೂ ತೆಗೆದುಕೊಂಡಿರುವ ಸಾಲಗಳ ಒಟ್ಟು ಮೊತ್ತ 149.4 ಕೋಟಿ ರೂಪಾಯಿ ಹಾಗೂ ಈ ಸಾಲಗಳನ್ನು 31-3-93ರವರೆಗೆ, ಕ್ರಮಬದ್ಧವಾಗಿ ಮರುಪಾವತಿ ಮಾಡಲಾಗಿದೆ.

ಆ) ಹೌದು.

ಇ) ವಿಶ್ವಬ್ಯಾಂಕ್ನ ಷರತ್ತುಗಳನ್ನು ಪಾಲಿಸುವಲ್ಲಿ ಉಂಟಾದ ಹಿನ್ನಡೆ ಮತ್ತು ನೀರಾವರಿ ಪಂಪುಸೆಟ್ಟುಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡುತ್ತಿರುವುದು ಹಾಗೂ ಅನೇಕ ಸರ್ಕಾರಿ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ಮಂಡಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬರಬೇಕಾಗಿರುವ ಬಾಕಿ ಇವುಗಳು ಮುಖ್ಯ ಕಾರಣಗಳಾಗಿವೆ.

ಈ) ವಿಶ್ವಬ್ಯಾಂಕ್ ತಾನು ನೀಡುವ ಸಾಲ ಸೌಲಭ್ಯವನ್ನು ಪೂರ್ಣವಾಗಿ ನಿರಾಕರಿಸಿದಲ್ಲಿ ಮಂಡಳಿಯು ಹಮ್ಮಿಕೊಂಡಿರುವ ಯೋಜನೆಗಳಿಗೆ ವಿಷಿಯನ್ ಅಭಿವೃದ್ಧಿಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಹಾಗೂ ವಾಣಿಜ್ಯ ಬ್ಯಾಂಕುಗಳು ಈ ಸಂಸ್ಥೆಗಳಿಂದ ಹೆಚ್ಚಿನ ಪ್ರಮಾಣದ ಸಾಲ ಸೌಲಭ್ಯವನ್ನು ಪಡೆಯಲು ಪ್ರಯತ್ನಿಸಲಾಗುವುದು.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕಿನಿಂದ ಸಾಲ

102 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿದ್ಯುಚ್ಛಕ್ತಿ ಮಂಡಳಿಗೆ ವಿಶ್ವಬ್ಯಾಂಕ್ನಿಂದ ಅಭಿವೃದ್ಧಿಗೋಸ್ಕರ ಕೊಡುತ್ತಿದ್ದ ಸಾಲದ ಹಣವನ್ನು ಇನ್ನು ಮುಂದೆ ಕೊಡಲು ಆಗುವುದಿಲ್ಲವೆಂದು ಸದರಿ ಬ್ಯಾಂಕಿನವರು ತಿಳಿಸಿದ್ದಾರೆಯೇ?

ಆ) ಹಾಗಿದ್ದಲ್ಲಿ ಕಾರಣಗಳೇನು?

ಇ) ಖೋತಾ ಬೀಳುವ ಹಣಕ್ಕೋಸ್ಕರ ಏರ್ಪಾಟು ಮಾಡಲಾಗಿರುವುದೇ (ವಿವರಗಳನ್ನೊದಗಿಸುವುದು)?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯ ಮಂತ್ರಿಗಳು) :

ಅ) ವಿಶ್ವಬ್ಯಾಂಕ್ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ನೀಡುತ್ತಿದ್ದ ಸಾಲ ಸೌಲಭ್ಯವನ್ನು 3-4-93ರಿಂದ ಅಮಾನತ್ತುಗೊಳಿಸಿ, ನಂತರ 26-10-93ರಂದು ರದ್ದುಪಡಿಸಿದೆ.

ಆ) ವಿಶ್ವಬ್ಯಾಂಕ್ನ ಷರತ್ತುಗಳನ್ನು ಪಾಲಿಸುವಲ್ಲಿ ಉಂಟಾದ ಹಿನ್ನಡೆ ಮತ್ತು ನೀರಾವರಿ ಪಂಪು ಸೆಟ್ಟುಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮೊಡುತ್ತಿರುವುದು ಹಾಗೂ ಅನೇಕ ಸರ್ಕಾರಿ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ಮಂಡಳಿಗೆ ಹೆಚ್ಚಿನ ಪ್ರಮಾಣದಲ್ಲಿ ಬರಬೇಕಾಗಿರುವ ಬಾಕಿ ಇವುಗಳು ಮುಖ್ಯ ಕಾರಣಗಳಾಗಿವೆ.

ಇ) ವಿಶ್ವಬ್ಯಾಂಕ್ ತಾನು ನೀಡುವ ಸಾಲ ಸೌಲಭ್ಯವನ್ನು ಪೂರ್ಣವಾಗಿ ನಿರಾಕರಿಸಿದಲ್ಲಿ, ಮಂಡಳಿಯು ಹಮ್ಮಿಕೊಂಡಿರುವ ಯೋಜನೆಗಳಿಗೆ ವಿಷಿಯನ್ ಅಭಿವೃದ್ಧಿ ಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಹಾಗೂ ವಾಣಿಜ್ಯ ಬ್ಯಾಂಕ್ಗಳು ಈ ಸಂಸ್ಥೆಗಳಿಂದ ಹೆಚ್ಚಿನ ಪ್ರಮಾಣದ ಸಾಲ ಸೌಲಭ್ಯವನ್ನು ಪಡೆಯಲು ಪ್ರಯತ್ನಿಸಲಾಗುವುದು.